ಕಥೆ

# ಹಾಥಿ ಕೆ ದಾಂತ್



ಮಧುರಾ ಕರ್ಣಮ್

ಕಲೆ: ವೆಂಕಟ್ರಮಣ ಭಟ್

‘ಯದ್ ರೋಚತೆ ತದ್ ಗ್ರಾಹ್ಯಂ... ಎನ್ನ ರೋಚತೆ ತದ್ ತ್ಯಾಜ್ಯಂ. ಸುಖೇನೈವ ಭೋಕ್ತವ್ಯಂ...’

ಎಂದು ಹೇಳಿದ ಆಚಾರ್ರು ‘ಅಂದ್ರ ಏನು ಇಷ್ಟ ಆಗ್ತದೊ ಅದನ್ನ ತಿನ್ನರಿ. ಏನು ರುಚಿಸೋದಿಲ್ಲ ಅದನ್ನ ಬಿಡ್ರಿ. ಆರಾಮಾಗಿ ಸುಖದಿಂದ ಊಟಾ ಮಾಡ್ರಿ’ ಎಂದು ಹೇಳಿದವರೇ ‘ಇನ್ನು ಅವರು ಊಟಕ್ಕ ಕೂಡ್ತಾರ. ನೀವು ಕರ್ತಾಗಳು ಯಥಾಶಕ್ತಿ ಗಾಯತ್ರಿ ಜಪಾ ಮಾಡ್ರಿ’ ಎಂದರು. ನಾನು ನೋಡುತ್ತ ತುಸು ದೂರದಲ್ಲೇ ಕುಳಿತಿದ್ದೆ. ಅವರ ಊಟ ಆರಂಭವಾಗುತ್ತಿದ್ದಂತೆ ಪರಿಚಿತ ಮುಖವೊಂದು ನನ್ನ ಮುಂದೆ ಹಾದು ತಕ್ಷಣ ನಿಂತಿತು. ‘ಚಿದು... ಹೆಂಗಿದ್ದೀಯೊ?’ ಎಂಬ ಧ್ವನಿ. ಅಪರಿಚಿತ ಕಾಶಿಯಲ್ಲಿ ನನ್ನನ್ನು ಕನ್ನಡದಲ್ಲಿ ಮಾತನಾಡಿಸುವವರು ಯಾರಿರಬಹುದು ಎಂದು ನೆನಪಿನಂಗಳ ಕೆದಕಿದಾಗ ಮೇಲೆದ್ದು ಬಂದದ್ದು ಸುಶೀಲಾ ವೈನಿ.

‘ವೈನಿ... ನೀವು ಇಲ್ಲೆ? ಹೆಂಗ? ಹೆಂಗಿದ್ದೀರಿ?’ ಎನ್ನುವ ಅದೇ ಪ್ರಶ್ನೆಗಳನ್ನು ನಾನು ಅವರಿಗೆ ಕೇಳಿದ್ದೆ. ‘ನಿಂದ್ರು... ಬಂದ್ಯಾ’ ಎಂದವರೇ ಮೂಲೆಯಲ್ಲಿಟ್ಟಿದ್ದ ತಮ್ಮ ಚೀಲವನ್ನು ತೆಗೆದುಕೊಂಡು ಬಂದರು. ಅದೇ ಸರಳತೆ... ಕಚ್ಚೆ ಹಾಕಿ ಉಟ್ಟಿದ್ದ ಒಂಬತ್ತು ವಾರಿ ಬಾಂಬರ್ ಸೀರೆ, ಎತ್ತಿ ಕಟ್ಟಿದ ತುರುಬು, ಉದ್ದ ಕುಂಕುಮ... ನೋಡಿದಾಕ್ಷಣ ಗೌರವ ಮೂಡುವ ವ್ಯಕ್ತಿತ್ವ. ದೇಹ ತುಸು ಸ್ಥೂಲವಾಗಿತ್ತು. ಮುಖದಲ್ಲಿ ನಿರಿಗೆಗಳ ಜೊತೆ ಪ್ರೌಢತೆಯೂ ಎದ್ದು ಕಾಣುತ್ತಿತ್ತು. ಚೀಲವನ್ನಿಟ್ಟು ಪಕ್ಕ ಕುಳಿತವರೇ, ‘ನಾವು ನಿರ್ಮಲ ಟ್ರಾವೆಲ್ಸನಿಂದ ಉತ್ತರ ಭಾರತದ ಯಾತ್ರಾಕ್ಕ ಬಂದೇವಿ. ಮಕ್ಕಳು... ಮೊಮ್ಮಕ್ಕಳು ಅಂತ ಸಂಸಾರದಾಗ ಸದಾ ಬೇಯೋದನ ಆತು. ನೀನ ನೋಡಿಯಲಪಾ. ಈಗ ಸೊಸಿ ಮನಿ... ಮಕ್ಕಳನ್ನ... ಅತ್ತೆವರನ್ನ ಛೊಲೊ ನೋಡಕೋತಾಳ. ಚಿಂತಿಲ್ಲ. ಅದಕ್ಕ ಸ್ವಲ್ಪ ದೇವರು... ದಿಂಡರು... ಯಾತ್ರಾ... ತೀರ್ಥ... ಮಾಡೋಣಂತ ಬಂದೇವಿ’ ಎಂದರು. ‘ಇಲ್ಲೆ ಶ್ರಾದ್ಧ ಭಾಳ ಛೊಲೊ ಮಾಡಸ್ತಾರ ಅಂದಿದ್ರು. ಅದಕ್ಕ ನಮ್ಮ ಮಾವಂದು, ಕೃಷ್ಣ ಭಾವಜಿದು ಹಂಗ ಅಚ್ಯುತ ಭಾವಜಿದು ಮಾಡಲಿಕ್ಕತ್ತೇವಿ’ ಎಂದರು. ಹೊಟ್ಟೆಯಲ್ಲಿ ಸಂಕಟವಾದಂತಾದರೂ ಸುಧಾರಿಸಿಕೊಂಡು, ‘ಮತ್ತ ಮೋಹನಣ್ಣಾ...?’ ಎಂದು ಕೇಳಿದೆ. ಕೈ ತೋರಿಸಿ, ‘ಅಲ್ನೋಡು... ಮಾಡಲಿಕ್ಕತ್ತಾರಲಾ’ ಎಂದು ಕೈ ತೋರಿಸಿದರು. ಮೋಹನಣ್ಣನ ಮುಖದಲ್ಲಿ ಸುಕ್ಕುಗಳು ಹೆಚ್ಚಾಗಿದ್ದವು. ಅದೇ ಪೆದ್ದು ಕಳೆ. ಹೊಟ್ಟೆ ಗುಡಾಣವಾಗಿತ್ತು.

‘ನೀ ಹೆಂಗಿದ್ದಿ ಚಿದು? ಈಗ ಎಲ್ಲಿದ್ದಿ? ಏನ್ಮಾಡ್ಲಿಕ್ಕತ್ತಿ?’ ಎಂಬೆಲ್ಲ ಪ್ರಶ್ನೆಗಳು ವೈನಿಯ ಕಡೆಯಿಂದ ಒಟ್ಟಿಗೆ ತೂರಿಬಂದವು.

‘ನಾ ಆರಾಮಿದ್ದೇನ್ರಿ ವೈನಿ. ಈಗ ಬೆಂಗಳೂರಾಗ ಇರ್ತೇನಿ. ಮಗಾ, ಮಗಳು ಕಾಲೇಜು ಕಲೀಲಿಕ್ಕತ್ತಾರ. ಸೆಂಟ್ರಲ್ ಬ್ಯಾಂಕ್‌ನಿಂದ ಮೂರು ತಿಂಗಳು ಟ್ರೇನಿಂಗಿಗೆ ಕಾಶಿಗೆ ಹಾಕಿದ್ದರು. ದಿನಾ ಗಂಗಾಸ್ನಾನ...